(ಸದನವು ಮಧ್ಯಾಹ್ನ 1-55 ಕ್ಕೆ ಮುಂದೂಡಲ್ಪಟ್ಟು ಪುನಃ 3 ಗಂಟೆಗೆ ಸಮಾವೇಶ ಗೊಳ್ಳುವುದಾಗಿ ನಿಶ್ಚಯಿಸಿತು).

(ಮಾನ್ಯ ಉಪಾಧ್ಯಕ್ಷರು ಶ್ರೀ ಚಂದ್ರಶೇಖರ ಮಾಮನಿ) ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ನಿಯಮ 351ರ ಮೇರೆಗೆ ಚರ್ಚೆ :-

(ಅ) ವಿಷಯ :- ಟಿ.ಸಿ.ಹೆಚ್. ದ್ವಿತೀಯ ವರ್ಷದ ಫಲಿತಾಂಶ ಬಾರದೇ ಇರುವ ಬಗ್ಗೆ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ (ಪಾಂಡವಪುರ) :- ನಿಯಮ 351 ರ ಪ್ರಕಾರ ನಾನು ಇಲ್ಲಿ ಟಿ.ಸಿ.ಹೆಚ್. ದ್ವಿತೀಯ ವರ್ಷದ ಫಲಿತಾಂಶ ಇಲ್ಲಿಯವರೆಗೆ ಬಾರದೇ ಇರುವ ಬಗ್ಗೆ ತೊಂದರೆಯಾಗಿದೆ ಎಂಬ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇನೆ. ಟಿ.ಸಿ.ಹೆಚ್. ಪರೀಕ್ಷೆ ಈಗಾಗಲೇ ಮುಗಿದಿದ್ದು, 1995-96 ನೇ ಸಾಲಿನ ಮೇ ತಿಂಗಳಲ್ಲಿ ನಡೆದ ದ್ವಿತೀಯ ವರ್ಷದ ಟಿ.ಸಿ.ಹೆಚ್. ಪರೀಕ್ಷೆ ಫಲಿತಾಂಶ ಇದುವರೆವಿಗೂ ಬಂದಿರುವುದಿಲ್ಲ. ಆದರೆ ಈಗ 19 ಸಾವಿರ ಪ್ರಾಥಮಿಕ ಶಾಲಾ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ಸರಕಾರ ಆದೇಶ ಹೊರಡಿಸಿದ್ದು ವಿದ್ಯಾರ್ಥಿಗಳು ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೋಂದಣಿ ಮಾಡಿಕೊಳ್ಳಲು ದಿನಾಂಕ 4-8-96 ರಂದು ಕೊನೆಯ ದಿನಾಂಕವೆಂದು ನಿಗದಿ ಮಾಡಲಾಗಿದೆ. ಆದ್ದರಿಂದ ದ್ವಿತೀಯ ವರ್ಷದ ಟಿ.ಸಿ.ಹೆಚ್. ಫಲಿತಾಂಶವನ್ನು ಬೇಗ ಪ್ರಕಟಿಸುವುದು ಅಥವಾ ನೊಂದಣಿ ದಿನಾಂಕವನ್ನು ಮುಂದೂಡುವ ಬಗ್ಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ :- (ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :- ಮಾನ್ಯ ಅಧ್ಯಕ್ಷರೇ, ಹೇಳಿಕೆ ಈ ರೀತಿ ಇದೆ.

1) ಪ್ರಥಮ ವರ್ಷ ಟಿ.ಸಿ.ಹೆಚ್. ದಾಖಲಾತಿ ಬಗ್ಗೆ 1995-96 ರ ಶೈಕ್ಷಣಿಕ ವರ್ಷದಿಂದ ಹೊಸ ನೀತಿ ಜಾರಿಗೆ ಬಂದಿದ್ದು, ಹಲವಾರು ದಾವೆಗಳು ನ್ಯಾಯಾಲಯದಲ್ಲಿ ಇತ್ಯರ್ಥವಾಗದೇ ಉಳಿದಿದ್ದರಿಂದ, ಪ್ರಥಮ ವರ್ಷದ ದಾಖಲಾತಿಯನ್ನು ಡಿಸೆಂಬರ್ 95ರ ವರೆಗೆ ವಿಸ್ತರಿಸಲಾಗಿತ್ತು. ಪ್ರತಿ ವರ್ಷ 220 ದಿನಗಳು ತರಗತಿ ನಡೆಯಬೇಕಾಗಿದ್ದು, ಈ ಬಗ್ಗೆ ಶಾಲಾ ದಿನಗಳು ಕೊರತೆಯಾದ್ದರಿಂದ ಸಾಮಾನ್ಯವಾಗಿ "ಮೇ" ಮಾಹೆಯ ಮೊದಲ ವಾರದಲ್ಲಿ ನಡೆಯಬೇಕಾಗಿದ್ದ ಈ ಪರೀಕ್ಷೆಯನ್ನು ಮೇಲ್ಕಂಡ ಅನಿವಾರ್ಯ ಕಾರಣಗಳಿಂದ "ಮೇ"ತಿಂಗಳ ಕೊನೆಯ ವಾರದಲ್ಲಿ ನಡೆಸಲಾಯಿತು ಮತ್ತು ಈ ವಿದ್ಯಾರ್ಥಿಗಳ ಪ್ರಾಯೋಗಿಕ ಹಾಗೂ ಆಂತರಿಕ ಪರೀಕ್ಷೆಗಳನ್ನು ಜೂನ್ ತಿಂಗಳ ಕೊನೆಯ ವಾರದಲ್ಲಿ ನಡೆಸಲಾಗಿದೆ.

2) ಟಿ.ಸಿ.ಹೆಚ್. ಉತ್ತರ ಪತ್ರಿಕೆಗಳ ಮೌಲ್ಯಮಾಪನ ದರವು 2-50 ರೂಪಾಯಿ ಗಳಿದ್ದು, ಈ ಬಗ್ಗೆ ಶಿಕ್ಷಕರು ಅಸಮಾಧಾನಗೊಂಡು ಮೌಲ್ಯಮಾಪನ ಕಾರ್ಯಕ್ಕೆ ಹೆಚ್ಚು ಜನ ಶಿಕ್ಷಕರು ಹಾಜರಾಗಲಿಲ್ಲ. ಮತ್ತು ಮೌಲ್ಯಮಾಪನ ಕಾರ್ಯಕ್ಕೆ ಹಾಜರಾದವರು ಸಹ

ಮೌಲ್ಯಮಾಪನ ದರವು ಹೆಚ್ಚಾಗಿಲ್ಲವೆಂದು ಪ್ರತಿಭಟಿಸಿದರು. ಮೌಲ್ಯಮಾಪನ ದರವನ್ನು ರೂ. 2-50 ರಿಂದ 4-00 ರೂಪಾಯಿಗಳಿಗೆ ಹೆಚ್ಚಿಸಿ, ದಿನಾಂಕ 16-6-1996 ರಂದು ಆದೇಶ ನೀಡಿದ ನಂತರ ಮೌಲ್ಯಮಾಪನ ಕಾರ್ಯವನ್ನು ಪ್ರಾರಂಭಿಸಿದರು.

3) ಸಾಮಾನ್ಯವಾಗಿ 10 ದಿನಗಳಲ್ಲಿ ಮುಗಿಯಬೇಕಾಗಿದ್ದ ಮೌಲ್ಯಮಾಪನ ಕಾರ್ಯವು ಈ ಸಮಸ್ಯೆಯಿಂದಾಗಿ 20 ದಿನಗಳ ವರೆಗೆ ವಿಸ್ತರಿಸಬೇಕಾಯಿತು.

ಟಿ.ಸಿ.ಹೆಚ್. ಪರೀಕ್ಷಾ ಫಲಿತಾಂಶವನ್ನು ಸಾಮಾನ್ಯವಾಗಿ ಪರೀಕ್ಷೆ ನಡೆದ ಎರಡು ತಿಂಗಳ ನಂತರ ಪ್ರಕಟಿಸಲಾಗುತ್ತಿತ್ತು.

ಆದರೆ ಈ ಬಾರಿ ಮೇಲ್ಕಂಡ ಕಾರಣಗಳಿಂದ ಆಗಸ್ಟ್ ಮೊದಲ ವಾರದಲ್ಲಿ ಪ್ರಕಟಿಸಲು ಕ್ರಮ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಲು ಇಚ್ಛಿಸುತ್ತೇನೆ.

03-20 ಪಿ. ಎಂ.

(ಅ) ಗದಗಿನ ವಿದ್ಯಾದಾನ ಸಮಿತಿ ಪದವಿ ಪೂರ್ವ ಮಹಾವಿದ್ಯಾಲಯದ ನಿವೃತ್ತ ಪ್ರಾಂಶುಪಾಲರಿಗೆ ಕೆ.ಸಿ.ಎಸ್.ಆರ್. 42 (ಬಿ) ಅನ್ವಯ ವೇತನ ಸೌಲಭ್ಯ.

ಶ್ರೀ ಡಿ. ಆರ್. ಪಾಟೀಲ್ :- ಮಾನ್ಯ ಉಪಾಧ್ಯಕ್ಷರೇ, ಗದಗಿನ ವಿದ್ಯಾದಾನ ಸಮಿತಿ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಪದೋನ್ನತಿ ಹೊಂದಿ ಪ್ರಾಂಶುಪಾಲರಾಗಿ ನಿವೃತ್ತರಾದ ಶ್ರೀ ಎನ್. ಜಿ. ಹುಲಗಿ, ಶ್ರೀ ಎಸ್. ಎಸ್. ಸಾವುಕಾರ, ಹಾಗೂ ಶ್ರೀಮತಿ ಎಲ್. ಎಚ್. ದೂದಿಹಳ್ಳಿ ಅವರಿಗೆ ಸರಕಾರಿ ಆಜ್ಞೆ ನಂ. ಇಡಿ : 17 ಎಸ್.ಎಲ್.ಬಿ. 80 ದಿನಾಂಕ 11-5-82 ರ ಅನ್ವಯ ಕೆಸಿಎಸ್ಆರ್ 42 ಬಿ. ಅನ್ವಯ ದೊರೆಯಬೇಕಾದ ವೇತನ ನಿಗದಿ ಸೌಲಭ್ಯ ದೊರೆತಿಲ್ಲ. ಇದೇ ಸಂಸ್ಥೆಯಲ್ಲಿ ಇವರಿಗಿಂತ ನಂತರ ನಿವೃತ್ತರಾದ ಶ್ರೀ ವಿ. ಆರ್. ಹುಯಿಲಗೋಳ ಅವರಿಗೆ 42 (ಬಿ) ಅನ್ವಯ ವೇತನ ನಿಗದಿಯಾಗಿ ಸೌಲಭ್ಯ ನೀಡಲಾಗಿದೆ. ಇವರಿಗಿಂತ ಮೊದಲು ನಿವೃತ್ತಿಯಾಗಿ ದಶಕಗಳೇ ಸಂದಿದ್ದರೂ ಮೇಲ್ಕಾಣಿಸಿದ ಪ್ರಾಂಶುಪಾಲರಿಗೆ ಅವರು ಹತ್ತಾರು ಬಾರಿ ಮನವಿ ಸಲ್ಲಿಸಿದ್ದರೂ, ಶಿಕ್ಷಣ ಇಲಾಖೆ ಶಿಫಾರಸ್ಸು ಮಾಡಿದ್ದರೂ ಸಹ ಸೌಲಭ್ಯ ನೀಡದಿರುವ ಅನ್ಯಾಯದ ಬಗ್ಗೆ ಶಿಕ್ಷಣ ಹಾಗೂ ಹಣಕಾಸು ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ :- (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :- ಮಾನ್ಯ ಉಪಾಧ್ಯಕ್ಷರೇ, ವಿದ್ಯಾದಾನ ಸಮಿತಿ, ಗದಗ್ ಜಿಲ್ಲೆ, ಧಾರವಾಡ, ಈ ಸಂಸ್ಥೆಯ ವತಿಯಿಂದ ನಡೆಯುತ್ತಿರುವ ವಿ.ಡಿ.ಎಸ್. ಸಾವುಕಾರ, ಸಹ ಶಿಕ್ಷಕರು ಹಾಗೂ ಶ್ರೀ ಎನ್. ಜಿ. ಹುಲಗಿ, ಸಹ ಶಿಕ್ಷಕರು ಇವರುಗಳು ಕ್ರಮವಾಗಿ ದಿನಾಂಕ : 11-4-1982 ಹಾಗೂ 15-4-1980 ರಂದು ಪ್ರಾಚಾರ್ಯರಾಗಿ ಬಡ್ತಿ ಹೊಂದಿದ್ದು, ಕ್ರಮವಾಗಿ ದಿನಾಂಕ : 31-1-1989 ಹಾಗೂ 10-4-1982 ರಂದು ನಿವೃತ್ತಿ ಹೊಂದಿರುತ್ತಾರೆ. ಕರ್ನಾಟಕ ಸೇವಾ ನಿಯಮ 42 (ಬಿ) ಸೌಲಭ್ಯವನ್ನು ದಿನಾಂಕ : 11-5-82 ರಿಂದ ವಿಸ್ತರಿಸಿದ ಕಾರಣದಿಂದ ಹಾಗೂ ಈ ಶಿಕ್ಷಕರುಗಳು ಈ ಸೌಲಭ್ಯವನ್ನು ಇವರುಗಳಿಗೆ ವಿಸ್ತರಿಸಿರುವುದಿಲ್ಲ. ಇದೇ ರೀತಿ ವಿ.ಡಿ.ಎಸ್. ಸಂಯುಕ್ತ ಪದವಿ ಪೂರ್ವ ಕಾಲೇಜು,